# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1303(1507)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಅ. ದೇವೇಗೌಡ(ಪದವೀಧರರ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ರಸ್ತೆ ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ

(ಅ) ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿಗೆ ಸೇರಿದ ಮಾರಸಂದ್ರ ಗ್ರಾಮದಿಂದ ಹೊನ್ನಾದೇವಿಪುರ ಗೇಟ್‌ವರೆಗೆ ರಸ್ತೆ ಕಾಮಗಾರಿ ಕೈಗೊಂಡಿದ್ದು ಯಾವಾಗ; ಇದು ಪೂರ್ಣಗೊಂಡಿದೆಯೇ; (ವಿವರ ನೀಡುವುದು)

(ಆ) ಈ ಕಾಮಗಾರಿ ಸೇರಿದಂತೆ ದೊಡ್ಡ ತುಮಕೂರು ಗ್ರಾಮದಿಂದ ಗೌಡಹಳ್ಳಿ ಗ್ರಾಮದವರೆಗೆ ಕೆರೆ ಏರಿ ಮೇಲೆ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸದೆ ಸ್ಥಗಿತಗೊಂಡಿರುವ ಈ ಕೆರೆಗೆ ತಡಗೋಡೆ ಇಲ್ಲದಿರುವುದರಿಂದ ಅಪಾಯದ ಮಟ್ಟ ಏರಿಳಿತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವಾಗ ಸೂಕ್ತ ಕ್ರಮ ಕೈಗೊಳ್ಳಲಾಗುವುದು;

(ಇ) ಈ ರಸ್ತೆ ಸಂಪೂರ್ಣ ಮಣ್ಣು ರಸ್ತೆಯಾಗಿದ್ದು, ಮಳೆಗಾಲದಲ್ಲಿ ಸಾರ್ವಜನಿಕರಿಗೆ/ಶಾಲಾ ವಾಹನಗಳಿಗೆ/ದನಕರುಗಳಿಗೆ ತುಂಬಾ ತೊಂದರೆಯಾಗಿದ್ದು, ಸರ್ಕಾರವು ಕೂಡಲೇ ಆದ್ಯತೆ ಮೇಲೆ ಸದರಿ ಕಾಮಗಾರಿಯನ್ನು ಕೈಗೊಳ್ಳುವುದೇ? (ಸಂಪೂರ್ಣ ವಿವರ ನೀಡುವುದು)